# ಒಂದು ಪೂರ್ಣವಿರಾಮ

ದಶಕದ ಕಾಲ ಅಂತರರಾಷ್ಟ್ರೀಯ ಕ್ರಿಕೆಟ್ ಆಡಿದ ಬ್ಯಾಟ್ಸ್‌ಮನ್ ತನ್ನ ಬ್ಯಾಟಿನಿಂದ ರನ್‌ಗಳು ಸಿಡಿಯದಿದ್ದಾಗ ಅಥವಾ ತನ್ನ ಆಟ ಅತ್ಯುತ್ತಮ ಲಯದಲ್ಲಿದ್ದಾಗಲೇ ನಿವೃತ್ತನಾಗಲು ಯೋಚಿಸುತ್ತಾನೆ. ತನ್ನ ಆಟವನ್ನು ನಿಲ್ಲಿಸುವ ನಿಲುಗಡೆಯ ಬಿಂದುವೊಂದು ಅವನಿಗೆ ನಿಖರವಾಗಿ ಗೊತ್ತಿರುತ್ತದೆ. ಅದು ಒತ್ತಾಯದ್ದು, ಬೇಸರದ್ದು, ಸಂಕಟದ್ದು. ಆಟ ಇನ್ನೂ ಬಾಕಿ ಇರುತ್ತದೆ. ಆದರೂ ಪೂರ್ಣವಿರಾಮ ಎಲ್ಲದಕ್ಕೂ ಇರುವುದರಿಂದ ತನ್ನ ಆಟಕ್ಕೂ ಅವನು ಅಂತಿಮ ಬಿಂದುವೊಂದನ್ನು ಇಡುತ್ತಾನೆ. ಇದು ಸಂಗೀತದಲ್ಲೂ, ಚಿತ್ರಕಲೆಯಲ್ಲೂ ಆಗಬಹುದು. ಒಂದು ರಾಗವನ್ನು ಜೀವನಪೂರ್ತಿ ಕಟೆದ ಸಂಗೀತಗಾರರು, ಅಪೂರ್ವ ವರ್ಣಮೇಳವನ್ನು, ರೇಖೆಯ ಬಳುಕನ್ನು ಸಾಧಿಸಿದ ಕಲಾವಿದರು ಒಂದು ದಿನ ಮೌನವಾಗುತ್ತಾರೆ. ಆ ಮೌನ ಹೊಸ ಹರಿವಿಗೆ ಅನುವು ಮಾಡಿಕೊಡುತ್ತದೆ.

ಹೀಗೆ ನಿವೃತ್ತಿಯ ಯೋಚನೆ ಮಾಡದವರು ರಾಜಕಾರಣಿಗಳು, ನಟರು ಮತ್ತು ಲೇಖಕರು. ನೈತಿಕತೆಯ ಬೆನ್ನೆಲುಬಿಲ್ಲದ ರಾಜಕಾರಣಿಗಳನ್ನು ಹೊರತುಪಡಿಸಿದರೆ ನಮ್ಮಲ್ಲಿನ ಅನೇಕ ಲೇಖಕರಿಗೆ, ನಟರಿಗೆ ಯಾವಾಗ ತಮ್ಮ ಅಭಿವ್ಯಕ್ತಿಯನ್ನು ನಿಲ್ಲಿಸಬೇಕು ಎಂಬುದರ ಅರಿವಿರುವುದಿಲ್ಲ. ಕಲೆಯ ಮಾಂತ್ರಿಕತೆ ತೀರಿದ್ದು ಅವರಿಗೆ ಗೊತ್ತೂ ಆಗುವುದಿಲ್ಲ. ಅವರು ಮತ್ತೆಮತ್ತೆ ತಮ್ಮ ಗೊಡ್ಡು ಕೃತಿಗಳನ್ನು ಜನರ ಮೇಲೆ ಎಸೆಯುತ್ತಲೇ ಇರುತ್ತಾರೆ. ಜನರು ಅವನ್ನು ಪಕ್ಕಕ್ಕೆ ಸರಿಸಿ ತಮ್ಮ ಜೀವಕ್ಕೆ ಸ್ಪಂದಿಸುವ ಕೃತಿಗಳನ್ನು ಆರಿಸಿಕೊಳ್ಳುತ್ತ ಹೋಗುತ್ತಾರೆ.



ಕಲೆ: ಬಸವರಾಜಾಚಾರ್ ಕೆ.ಶಿರ್:

ಯಾವುದನ್ನು ಎಲ್ಲಿ ನಿಲ್ಲಿಸಬೇಕು ಎಂಬುದು ಗೊತ್ತಿಲ್ಲದವರು ನಿಜವಾದ ಕಲಾವಿದರಾಗಿರುವುದಿಲ್ಲ, ಅವರಿಗೆ ಉತ್ತಮ ಕೃತಿಯನ್ನೂ ಕೊಡಲಾಗುವುದಿಲ್ಲ. ಸಾಹಿತ್ಯ ಮಾತ್ರವಲ್ಲ, ಕ್ರಿಯಾಶೀಲವಾಗಿ ಮಾಡುವ ಯಾವುದೇ ಕೆಲಸಕ್ಕೆ ಇದು ಅನ್ವಯಿಸುತ್ತದೆ. ತಮ್ಮ ಕಲೆಗೆ ಇಡಬೇಕಾದ ಪೂರ್ಣವಿರಾಮ ಅನುಭವದಿಂದ, ಎಚ್ಚರದಿಂದ, ವ್ಯಕ್ತಿತ್ವವನ್ನು ಪೂರ್ತಿಯಾಗಿ ತೊಡಗಿಸಿಕೊಳ್ಳುವುದರಿಂದ ಬರುತ್ತದೆ. ಬದಲಾಗಿ ಹೆಸರು ಮಾಡುವ ಅವಸರದಲ್ಲಿರುವ ವ್ಯಕ್ತಿಗಳಲ್ಲಿ ಇದು ಕೆಲಸ ಮಾಡುವುದಿಲ್ಲ. ಇದನ್ನು ಅನೇಕ ವೃತ್ತಿವಂತ ಲೇಖಕರು, ಕಲಾವಿದರು ಒಪ್ಪಲಾರರು. ಅವರಿಗೆ ಬದುಕಿನಲ್ಲಿ ಎಲ್ಲವನ್ನೂ ಒಂದು ಕೈ ನೋಡುವ ಉಮೇದು, ಚಲಾವಣೆಯಲ್ಲಿರುವ ಆಶೆ. ಪ್ರಶಸ್ತಿಯ ಕನಸುಗಳು ಅವರನ್ನು ಹೊಸ ಪ್ರಯತ್ನಗಳಿಗೆ ಎಳೆಸುತ್ತವೆ. ಹೊಸ ಕೆಲಸಗಳಿಗೆ ಬಳಸಿಕೊಳ್ಳಲು ಅವರ ಪ್ರತಿಭೆಯ ಎಣ್ಣೆ ಮುಗಿದಿರುತ್ತದೆ. ಖ್ಯಾತಿ ಮತ್ತು ಹಿಂದಿನ ಕೃತಿಗಳು ಅವರ ನೆರವಿಗೆ ಬರುವುದಿಲ್ಲ. ಜನರ ಟೀಕೆಗಳನ್ನು ಅವರು ಕೇಳಿಯೂ ಕೇಳದವರಂತೆ ಮುಂದಕ್ಕೆ ಹೋಗುತ್ತಾರೆ. ಮುಂದೆ ಆಗುವುದನ್ನು ಎಲ್ಲರೂ ಬಲ್ಲರು. ಹಾಗೆ ಮಂಕಾದ ಒಂದು ಕಾಲದ ಪ್ರತಿಭಾಶಾಲಿಗಳ ಹೊಸ ಕೃತಿಗಳು ಏಳಲಾಗದಂತೆ ಪಾತಾಳ ಮುಟ್ಟಿರುತ್ತವೆ. ಇದಕ್ಕೆ ಉದಾಹರಣೆಗಳನ್ನು ಹೊರಗೆಲ್ಲೂ ಹುಡುಕಬೇಕಿಲ್ಲ, ಅವು ನಮ್ಮ ಕಣ್ಣಮುಂದೆಯೇ ಇವೆ. ಇದು ಎಲ್ಲ ಕ್ರಿಯಾಶೀಲರಲ್ಲಿ ಆಗುವುದಿಲ್ಲ. ಕೆಲವರ ವಯಸ್ಸು ಆಗುತ್ತ ಆಗುತ್ತ ಅವರ ಬರವಣಿಗೆ, ಕಲೆ ಬೆಳೆಯುತ್ತ ಹೋಗುತ್ತವೆ. ಅವರು ತಮ್ಮ ಕಾಣ್ಕೆಗಳಿಂದ ನಮ್ಮನ್ನು ಅಲ್ಲಾಡಿಸುತ್ತಾರೆ. ಅಂತಹವರು ಎಲ್ಲ ಕಾಲಕ್ಕೂ ಕಡಿಮೆಯೇ. ಎಲ್ಲಿ ನಿಲ್ಲಿಸಬೇಕು ಎಂಬುದರ ಬಗ್ಗೆ ನಿರ್ಲಕ್ಷ್ಯದಿಂದಿರುವ ಹುಂಬರ ಕೃತಿಗಳಿಂದಲೇ ಕಾಲನ ಕಸದಬುಟ್ಟಿ ಸದಾ ತುಂಬಿರುತ್ತದೆ ಎಂಬುದನ್ನು ನಾವು ಮರೆಯಕೂಡದು.

**ಸಂದೀಪ ನಾಯಕ**